# ವಿಶೇಷ ಸೂಚನೆಗಳು / SPECIAL INSTRUCTIONS

- ಓ.ಎಂಅರ್. ಅರ್ಜಿ ನಮೂನೆಗಳನ್ನು ಸ್ಕ್ಯಾನ್ ಮಾಡಿಸುವುದರಿಂದ ಅವುಗಳ ಮೂಲೆಗಳನ್ನು ಮಡಿಚುವುದಾಗಲೀ ಮುದುರುವುದಾಗಲೀ, ಹರಿಯುವುದಾಗಲೀ ಮಾಡದೆ, ಹಾಳಾಗದಂತೆ ಎಚ್ಚರಿಕೆ ವಹಿಸುವುದು.
- Since the OMR applications will be scanned, handle carefully and do not fold the corners or tear or spoil the forms
- ಮೂಲ ಅರ್ಜಿಯಲ್ಲಿ ನೀಡಿರುವ ಮಾಹಿತಿಗಳ ಬಗ್ಗೆ ಯಾವುದೇ ಹಂತದಲ್ಲೂ ಬದಲಾವಣೆಗೆ ಅವಕಾಶವಿರುವುದಿಲ್ಲ.
- There is no provision for change of information furnished in the application at any stage.
- ಅರ್ಜಿ ನಮೂನೆ, ಉತ್ತರ ಪತ್ರಿಕೆಗಳಲ್ಲಿ ನಿಗದಿತ ಸ್ಥಳಗಳಲ್ಲಿ ಎಡಗೈ ಹೆಬ್ಬೆರಳ ಗುರುತನ್ನು ಹಾಕುವುದು. ಎಡಗೈ ಹೆಬ್ಬೆರಳ ಗುರುತು ರಹಿತ ಅರ್ಜಿ ನಮೂನೆಯನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು. ಎಡಗೈ ಹೆಬ್ಬೆರಳ ಗುರುತು ಸ್ಪಷ್ಟವಾಗಿರಬೇಕು.
- Put your Left hand Thumb Impression in the application form and admission ticket in the space provided clearly . Application without left hand thumb impression will be rejected.
- ನೀವು ಉಪಯೋಗಿಸುವ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವು ಅಧಿಸೂಚನೆ ದಿನಾಂಕದ ನಂತರ ತೆಗೆಸಿದ್ದಾಗಿರಬೇಕು. ಉಪಯೋಗಿಸುವ ಎಲ್ಲಾ ಭಾವಚಿತ್ರಗಳು ಒಂದೇ ಸಮಯದಲ್ಲಿ ತೆಗೆದವುಗಳಾಗಿರಬೇಕು.
- Pass Port size Photographs used by the candidates should have been taken after the Notification date and should have taken at the same time.
- ಒಂದಕ್ಕಿಂತ ಹೆಚ್ಚು ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತಾವು ಪಡೆದ ಎಲ್ಲಾ ಪ್ರವೇಶ ಪತ್ರಗಳನ್ನು ಪರೀಕ್ಷಾ ದಿನದಂದು ಪರೀಕ್ಷೆಗೆ ಹಾಜರಾಗುವ ಕೇಂದ್ರದಲ್ಲಿ (ಆ ಕೇಂದ್ರದ್ದನ್ನು ಹೊರತುಪಡಿಸಿ) ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವುದು.
- Candidates who have applied in more than one district have to surrender all admission tickets to the invigilator on the day of examination at the centre where they are attending the examination (except the centre's where they are attending examination.)
- ಸೇವಾನಿರತ ಶಿಕ್ಷಕರು ಮಾತ್ರ ಅರ್ಜಿಯೊಂದಿಗೆ ಸೇವಾಪ್ರಮಾಣ ಪತ್ರ ಲಗತ್ತಿಸಬೇಕು. ಉಳಿದ ಅಭ್ಯರ್ಥಿಗಳು ಅರ್ಜಿ ನಮೂನೆಯೊಂದಿಗೆ ಯಾವುದೇ ಮೂಲಪ್ರಮಾಣ ಪತ್ರಗಳು ಅಥವಾ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಬಾರದು. ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ ಯಾವುದೇ ಹಂತದಲ್ಲಿ ಅಪೂರ್ಣ/ಅಸ್ಪಷ್ಟ /ತಪ್ಪು ಮಾಹಿತಿಗೆ ಅಭ್ಯರ್ಥಿಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಅರ್ಜಿ ನಮೂನೆಯಲ್ಲಿ ನಿಗದಿತ ಸ್ಥಳದಲ್ಲಿ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು. ಪಿನ್ ಅಥವಾ ಸ್ಟೇಪಲ್ ಮಾಡಬಾರದು.
- Only In service Teachers have to enclose Service Certificate with the Application Form. Other candidates need not enclose any certificate either original or Xerox along with the application. Selection will be based on the information furnished in the application form. Candidates are responsible for giving incomplete / illegible / wrong information Affix pass port size photograph at specified place in the Application form. Do not staple or pin.
- ಕಾನೂನಿನ ನ್ಯಾಯಾಧಿಕಾರ ಪ್ರದೇಶ : ಸೀಟು ಆಯ್ಕೆ ಮತ್ತು ದಾಖಲಾತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಕರಾರು/ದಾವೆಗಳನ್ನು ಸಲ್ಲಿಸಬಯಸುವವರಿಗೆ ಬೆಂಗಳೂರು ನಗರ ವ್ಯಾಪ್ತಿಗೆ ಒಳಪಡುವ ಕೋರ್ಟುಗಳಲ್ಲಿ ಮತ್ತು ಮಾನ್ಯ ಉಚ್ಛ ನ್ಯಾಯಾಲಯ, ಕರ್ನಾಟಕ ಇಲ್ಲಿ ಮಾತ್ರ ಸಲ್ಲಿಸುವ ಅವಕಾಶವಿರುತ್ತದೆ.
- Legal jurisdiction : Any dispute that may arise in respect of seat selection and admission is subject to the jurisdiction of the courts with in the city of Bangalore and the Hon'ble High Court of Karnataka.
- ಈ ಮಾಹಿತಿ ಪುಸ್ತಿಕೆಯಲ್ಲಿ ನಿಗದಿಪಡಿಸಿರುವ ಶುಲ್ಕ ಹಣವನ್ನು ಮತ್ತು ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ಶುಲ್ಕವನ್ನು ಹೊರತು ಪಡಿಸಿ ವಿದ್ಯಾರ್ಥಿಗಳು ಯಾವುದೇ ಶುಲ್ಕವನ್ನು ಸಂಸ್ಥೆಗಳಲ್ಲಿ ಪಾವತಿಸಬೇಕಾಗಿಲ್ಲ.
- No other fee except the fee specified in this brochure and University Affiliation fee shall be paid by the candidates at institutions.